ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಬಿ.ಕೆ.ಜೆ ವಕೀಲರಿಂದಃ**

ವಾದಿ ಹೊನಕುಪ್ಪಿ ಗ್ರಾಮದ ನಿವಾಸಿ ಎಂದರೆ ನಿಜ. ಹೊನಕುಪ್ಪಿ ಹಾಗೂ ಕೌಜಲಗಿ ಗ್ರಾಮವು ಒಂದಕ್ಕೊಂದು ಹೊಂದಿಕೊಂಡಿರುತ್ತವೆ ಎಂದರೆ ನಿಜ. ಎರಡೂ ಊರಿನ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆ ಎಂದರೆ ನಿಜ. ನಾನು ಶಾಲೆಗೆ ಹೋಗಿಲ್ಲ. ನನಗೆ ಒಬ್ಬ ಗಂಡು ಮಗ ಹಾಗೂ ಒಬ್ಬಳು ಹೆಣ್ಣುಮಗಳು ಇರುತ್ತಾರೆ. ನಮ್ಮ ಮನೆತನದ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನನಗೆ ಯಾವುದೇ ದುಶ್ಚಟಗಳು ಇರುವುದಿಲ್ಲ. ನಾನು ಯಾವುದೇ ದಾಖಲೆಗೆ ಸಹಿ ಹಾಕಬೇಕಾದರೆ ಓದಿಸಿ, ತಿಳಿದುಕೊಂಡು ನಂತರ ಸಹಿ ಹಾಕುತ್ತೇನೆಂದರೆ ನಿಜ. ಮನೆತನದ ಅಡಚಣೆಗಾಗಿ ಆಸ್ತಿಯನ್ನು ಮಾರಾಟ ಮಾಡುವುದು ಹಾಗೂ ಸಾಲ ಪಡೆಯುವುದನ್ನು ಮಾಡುತ್ತೇನೆ.

ನಿಪಿ.2 ಕ್ಕೆ ನಾನು ಸಹಿ ಹಾಕಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.2(ಎ) ಎಂದು ಗುರುತಿಸಲಾಗಿದೆ. ನಿಪಿ.2ನ್ನು ಮಾಡುವ ಕಾಲಕ್ಕೆ ನಾನು, ವಾದಿ, ಲಗಳಿ ಹಾಗೂ ಒಬ್ಬಿ ಎಲ್ಲರೂ ಸೇರಿದ್ದೇವು. ಆ ದಿನ ನಾವು ಗೋಟಡಕಿಯವರ ಕಚೇರಿಗೆ ಬಂದು ನಿಪಿ.2 ರಂತೆ ಕಾಗದ ಬರೆಯಲು ಮಾಹಿತಿ ಕೊಟ್ಟಿರುತ್ತೇವೆ ಎಂದರ ಸಾಕ್ಷಿಯು ಸದರಿ ನಿಪಿ.2 ಕ್ಕೆ ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಜಮೀನು ಮಾರಾಟ ಮಾಡುವ ವ್ಯಕ್ತಿಯು ಅದರ ದಾಖಲೆಗಳನ್ನು ತೆಗೆದುಕೊಂಡು ಬಂದು ಕಾಗ ಪತ್ರವನ್ನು ಬರೆಯಲು ಮಾಹಿತಿ ಕೊಡುತ್ತಾನೆಂದರೆ ನಿಜ. ನಿಪಿ.2 ನ್ನು ಬರೆಯುವ ದಿನ ದಾವಾ ಆಸ್ತಿಯ ಪಹಣಿಪತ್ರಿಕೆಯನ್ನು ತೆಗೆದುಕೊಂಡು ಬಂದಿದ್ದೆ. ನಿಪಿ.2ನ್ನು ಬರೆಯಲು ವಾದಿ ಮಾಹಿತಿ ಕೊಟ್ಟಿರುವ ಬಗ್ಗೆ ಅದರಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ನಿಜ. ನಿಪಿ.2 ನ್ನು ಬರೆಯಲು ವಾದಿ ಮಾಹಿತಿ ಕೊಟ್ಟಿದ್ದು, ಅದರಲ್ಲಿರುವ

ಸಂಗತಿಗಳು ತಪ್ಪು ಇರುತ್ತವೆ ಎಂದು ಹೇಳಿ ನಾನು ಸಹಿ ಮಾಡಲು ತಕರಾರು ಮಾಡಿರುವುದಿಲ್ಲ ಎಂದರೆ ನಿಜ.ಅದೇ ರೀತಿ ದಸ್ತು ಬರಹಗಾರರಾದ ಗೋಟಡಕಿ ಹಾಗೂ ಸಾಕ್ಷಿದಾರರಾದ ಲಗಳಿ ಹಾಗೂ ಒಬ್ಬಿಯವರು ಸಹ ನಿಪಿ.2 ನ್ನು ವಾದಿಯ ಹೇಳಿಕೆಯ ಮೇರೆಗೆ ಬರೆಯಲಾಗಿದ್ದು, ಅದಕ್ಕೆ ತಾವು ಸಹಿ ಮಾಡುವುದಿಲ್ಲ ಎಂದು ತಕರಾರು ಮಾಡಿರುವುದಿಲ್ಲ ಎಂದರೆ ನಿಜ. ನಿಪಿ.2 ರಲ್ಲಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು ಹಾಗೂ ವಾದಿ ಅದನ್ನು ಖೊಟ್ಟಿಯಾಗಿ ಸೃಷ್ಟಿಕೊಂಡಿರುತ್ತಾನೆಂದು ಹೇಳಿ ನಾನು ಆತನ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ನಿಪಿ.2 ನ್ನು ವಾದಿಯ ಹೇಳಿಕೆಯ ಮೇರೆಗೆ ಬರೆಯಲಾಗಿರುತ್ತದೆಂಬ ಸಂಗತಿಯನ್ನು ನನ್ನ ತಕರಾರಿನಲ್ಲಾಗಲೀ, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ನಿಜ. ಸನ್ 2014 ರಲ್ಲಿ ಕೌಜಲಗಿ ಗ್ರಾಮದ ಜಮೀನುಗಳು ಪ್ರತಿ ಎಕರೆಗೆ 4 ರಿಂದ 6 ಲಕ್ಷ ರೂ. ಕಿಮ್ಮತ್ತು ಎಂದರೆ ನಿಜ. ಸಾಮಾನ್ಯವಾಗಿ ಕಬ್ಬಿನ ಬೆಳೆಯನ್ನು 03 ವರ್ಷಗಳಿಗೊಮ್ಮೆ ಬದಲಾವಣೆ ಮಾಡುತ್ತಾರೆಂದರೆ ನಿಜ. ಆದ್ದರಿಂದ ಕಬ್ಬಿನ ಬೆಳೆಯನ್ನು ತೆಗೆಯಲು 03 ವರ್ಷ ಬೇಕಾಗುವುದರಿಂದ ಸಾಮಾನ್ಯವಾಗಿ 02 ವರ್ಷ ಅಥವಾ 03 ವರ್ಷದ ಅವಧಿಯನ್ನು ಖರೀದಿ ಕರಾರು ಪತ್ರದಲ್ಲಿ ನಿಗದಿಪಡಿಸಿರುತ್ತಾರೆಂದರೆ ನಿಜ. ನಿಪಿ.2 ಕ್ಕೆ ನಾನು, ವಾದಿ, ಸಾಕ್ಷಿದಾರರಾದ ಲಗಳಿ, ಒಬ್ಬಿ ಹಾಗೂ ದಸ್ತುಬರಹಗಾರರಾದ ಆನಂದ ಗೋಟಡಕಿಯವರು ಸಹಿ ಮಾಡಿರುತ್ತಾರೆಂದರೆ ನಿಜ. ನಿಪಿ.2ನ್ನು ನೊಂದಣಿ ಮಾಡುವ ಕಾಲಕ್ಕೆ ಅದರಲ್ಲಿರುವ ಸಂಗತಿಗಳು ಸರಿ ಇರುವ ಬಗ್ಗೆ ಉಪನೊಂದಣಿ ಅಧಿಕಾರಿಗಳು ನನಗೆ ಕೇಳಿರುವುದಿಲ್ಲ. ನಿಪಿ.2 ರಲ್ಲಿರುವ ಭಾವಚಿತ್ರ ಹಾಗೂ ಅದರ ಎದುರಿಗೆ ಇರುವ ಸಹಿ ನನ್ನದು ಇರುತ್ತದೆ. ವಾದಿ ಅನಕ್ಷರಸ್ಥ ಇದ್ದುದರಿಂದ ನಿಪಿ.2 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾನೆಂದರೆ ನಿಜ. ನಿಪಿ.2 ರಲ್ಲಿ ನಮೂದಿಸಿರುವಂತೆ ಹಣ ನನಗೆ ಮುಟ್ಟಿರುವುದಿಲ್ಲ ಹಾಗೂ ಅದನ್ನು ವಾದಿಯು ಖೊಟ್ಟಿಯಾಗಿ

ಸೃಷ್ಟಿಸಿಕೊಂಡಿರುತ್ತಾನೆಂದು ಆತನ ವಿರುದ್ಧ ನಾನು ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನನ್ನ ತಕರಾರಿನಲ್ಲಿ ನಿಪಿ.2 ರಂತೆ ವಾದಿಗೆ ದಾಖಲೆಯನ್ನು ಕೊಟ್ಟಿದ್ದ ಬಗ್ಗೆ ಒಪ್ಪಿ ಕೊಂಡಿದ್ದು ಆದರೆ ರೂ. 4 ಲಕ್ಷ ಕೈಗಡ ಸಾಲ ಪಡೆದಿರುತ್ತೇನೆಂದು ಹೇಳಿ ಬರೆಸಿರುತ್ತೀರಿ ಎಂದರೆ ನಿಜ. ನಾನು ವಾದಿಯಿಂದ ರೂ.7,60,000/- ಹಣವನ್ನು ಪಡೆದಿರುವುದಿಲ್ಲ, ಕೇವಲ 4 ಲಕ್ಷ ರೂ. ಮಾತ್ರ ಪಡೆದುಕೊಂಡಿರುತ್ತೇನೆಂದು ಹೇಳಿ ನಿಪಿ.2 ಕ್ಕೆ ಪೂರಕವಾಗಿ ಬೇರೆ ಯಾವುದೇ ದಾಖಲೆಯನ್ನು ವಾದಿಯಿಂದ ಬರೆಸಿಕೊಂಡಿರುವುದಿಲ್ಲ. ಸದರಿ ನಿಪಿ.2 ರಂತೆ ನನಗೆ ರೂ.7,60,000/- ಮುಟ್ಟಿರುವುದಿಲ್ಲ ಕೇವಲ ನಾನು ವಾದಿಯಿಂದ 4 ಲಕ್ಷ ರೂ. ಹಣ ಮಾತ್ರ ಪಡೆದಿರುತ್ತೇನೆಂದು ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸುತ್ತೀರಾ? ಎಂದರೆ ಸಾಕ್ಷಿಯು ನಿಪಿ.2 ಕ್ಕೆ ನನ್ನ ಪರವಾಗಿ ಯಾರೂ ಸಾಕ್ಷಿದಾರರು ಸಹಿ ಹಾಕಿರುವುದಿಲ್ಲ ಆದರೆ ಬೇರೆಯವರ ಸಾಕ್ಷ್ಯವನ್ನು ಮಾಡಿಸುತ್ತೇನೆಂದು ನುಡಿಯುತ್ತಾರೆ. ನಿಪಿ.2 ನ್ನು ಬರೆದುಕೊಡಡುವ ಕಾಲಕ್ಕೆ ಲಗಳಿ ಮತ್ತು ಒಬ್ಬಿಯವರನ್ನು ಹೊರತುಪಡಿಸಿ ಬೇರೆ ಯಾರೂ ಸಾಕ್ಷಿದಾರರು ಇರಲಿಲ್ಲ. ಸದರಿ ಲಗಳಿ ಮತ್ತು ಒಬ್ಬಿಯವರು ನಿಪಿ.2 ಕ್ಕೆ ಸಂಬಂಧಿಸಿದಂತೆ ನನ್ನ ಪರವಾಗಿ ಸಹ ವ್ಯವಹಾರ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಆಸ್ತಿಯ ಬಗ್ಗೆ ವ್ಯವಹಾರ ಮಾಡಬೇಕಾದರೆ ಮಾರಾಟ ಮಾಡುವವವರು ಹಾಗೂ ಖರೀದಿ ಮಾಡುವವರ ಇಬ್ಬರ ಪರವಾಗಿಯೂ ಸಾಕ್ಷಿದಾರರು ಬಂದಿರುತ್ತಾರೆಂದರೆ ನಿಜ. ಸದರಿ ನಿಪಿ.2 ರಂತೆ ವ್ಯವಹಾರ ಮಾಡುವ ಕಾಲಕ್ಕೆ ನನ್ನ ಪರವಾಗಿ ಸಾಕ್ಷಿದಾರರು ಬಂದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ನನಗೆ 4 ಲಕ್ಷ ರೂ. ಹಣವನ್ನು ಕೊಟ್ಟಿರುತ್ತಾನೆಂದು ಹೇಳಿ ಆತ ನನ್ನಿಂದ ಪ್ರಾಮಿಸರಿ ನೋಟನ್ನು ಬರೆಸಿಕೊಂಡಿರುವುದಿಲ್ಲ. ನಾನು ವಾದಿಯಿಂದ 4 ಲಕ್ಷ ರೂ. ಹಣವನ್ನು ಸಾಲ ಮಾತ್ರ

ಪಡೆದಿದ್ದು, ಖರೀದಿ ಕರಾರು ಪತ್ರ ಮಾಡಿಕೊಡುವ ಅವಶ್ಯಕತೆ ಇರುವುದಿಲ್ಲ ಎಂದು ನಾನು ವಾದಿಗೆ ಹೇಳಿರುವುದಿಲ್ಲ. ನಿಪಿ.2 ರಂತೆ ಬರೆದುಕೊಟ್ಟಿರುವ ಖರೀದಿ ಕರಾರು ಪತ್ರವು ತಪ್ಪು ಇರುತ್ತದೆದು ಹೇಳಿ ನನ್ನ ಹೆಂಡತಿ ಮಕ್ಕಳು ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನಿಪಿ.2 ರಲ್ಲಿ ದಾವಾ ಆಸ್ತಿಯ ಬೋಜಾ ಕಡಿಮೆ ಮಾಡಿಸಿ 11-ಇ ನಕ್ಷೆಯನ್ನು ಮಾಡಿಸಿಕೊಡಲು 03 ವರ್ಷಗಳ ಅವಧಿಯನ್ನು ನಿಗದಿಪಡಿಸಿರುವ ಬಗೆಗ ಒಕ್ಕಣೆ ಇರುತ್ತದೆಂದರೆ ನಿಜ. ಸಾಕ್ಷಿ ಮುಂದುವರೆದು ವಾದಿಯು ಆ ರೀತಿ ಬರೆಸಿರುತ್ತಾನೆಂದು ನುಡಿಯುತ್ತಾರೆ. ವಾದಿಯ ಹೇಳಿಕೆಯ ಮೇರೆಗೆ ಆ ರೀತಿ ಬರೆಸಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.2 ರಂತೆ ದಾಖಲೆಯನ್ನು ಬರೆದುಕೊಡುವಾಗ ದಾವಾ ಆಸ್ತಿಯ ಪಹಣಿಪತ್ರಿಕೆ ನನ್ನ ಹೆಸರಿಗೆ ಇತ್ತು ಎಂದರೆ ನಿಜ.

ಜಮೀನನ್ನು ಮಾರಾಟ ಮಾಡುವ ಮುಂಚೆ ಹಿರಿಯರು ಕುಳಿತುಕೊಂಡು ಮಾತುಕತೆ ಮಾಡುತ್ತಾರೆಂದರೆ ನಿಜ. ಸದರಿ ಪ್ರಕರಣದ ವ್ಯವಹಾರದ ಕುರಿತು ಲಗಳಿ ಮತ್ತು ಒಬ್ಬಿಯವರು ಹಿರಿತನ ಮಾಡಿರುತ್ತಾರೆಂದರೆ ಸಾಕ್ಷಿಯು ವಾದಿಯ ಪರವಾಗಿ ಬಂದಿದ್ದರು ಎಂದು ನುಡಿಯುತ್ತಾರೆ. ಸದರಿ ಇಬ್ಬರು ಸಾಕ್ಷಿದಾರರು ವಾದಿಯ ಪರ ಸಾಕ್ಷಿದಾರರು ಇದ್ದು, ನನ್ನ ಪರವಾಗಿ ಬೇರೆ ಸಾಕ್ಷಿದಾರರನ್ನು ಕರೆಸಿ ನಿಪಿ.2 ಕ್ಕೆ ಅವರ ಸಹಿ ಹಾಕಿಸುತ್ತೇನೆಂದು ವಾದಿಗೆ ಹೇಳಿರುವುದಿಲ್ಲ. ನನ್ನ ಪರವಾಗಿ ಯಾವುದೇ ಸಾಕ್ಷಿದಾರರನ್ನು ಕರೆದುಕೊಂಡು ಬಂದಿರಲಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ